ಏಕತಾನತೆಯ ಬದುಕು ಒಂಟಿತನಕ್ಕೆ ದೂಡುತ್ತದೆ. ದೊಡ್ಡವರೆನಿಸಿಕೊಂಡವರು ಚಿಕ್ಕವರ ಮೇಲೆ ನಿರಂತರ ದಬ್ಬಾಳಿಕೆ ನಡೆಸುತ್ತಿರುತ್ತಾರೆ. ಸಮುದಾಯದ ಹೆಸರಿನಲ್ಲಿ ಮಾಡಬಾರದ್ದನ್ನೆಲ್ಲ ಮಾಡಿಸುತ್ತಿರುತ್ತಾರೆ. ಲೈಂಗಿಕ ದೌರ್ಜನ್ಯ ನಡೆಸುವವರೂ ಇಲ್ಲದೇ ಇಲ್ಲ. ಇಂತಹ ಸ್ಥಿತಿಯನ್ನು ಎದುರಿಸುವ ಮಕ್ಕಳನ್ನೇ ಯುನಿಸೆಫ್, 'ಚೈಲ್ಡ್ ರಿಗ್ರೆಷನ್' ಅರ್ಥಾತ್ 'ಮಕ್ಕಳೇ ಬೇಡವೆಂಬ ನಿರ್ಧಾರ' ಎಂದು ಕರೆದಿದೆ.

ಊಟದ ಟೇಬಲ್ಲಿನ ಮೇಲೆ ಕುಳಿತ ಅಜ್ಜನಿಗೋ ಅಜ್ಜಿಗೋ ನಡೆದಾಡಲು ಊರುಗೋಲು ಒದಗಿಸುವುದು ಮನೆಯಲ್ಲಿ ದುಡಿಯುವ ಕೈಗಳ ಜವಾಬ್ದಾರಿ. ಕೆಲಸದ ಪಗಾರ ಎಷ್ಟೇ ಇರಲಿ, ಇಂತಹ ಖರ್ಚು ಬೊಜ್ಜು. ಈ ರೀತಿಯ ಆರೈಕೆಯ ಒತ್ತಡದ ನೊಗ ಹೊರುವ ಯುವಕ–ಯುವತಿಯರಿಗಂತೂ ಮದುವೆ ಯಾಕೆ ಬೇಕು, ಮಕ್ಕಳನ್ನು ಯಾಕೆ ಮಾಡಿಕೊಳ್ಳಬೇಕು ಎಂದು ಸಹಜವಾಗಿಯೇ ಅನಿಸತೊಡಗುತ್ತದೆ. ಮೇಲಾಗಿ, ಸಾಮಾಜಿಕ ವ್ಯವಸ್ಥೆ ಹೆಣ್ಣುಮಕ್ಕಳನ್ನು ಸದಾಕಾಲ ದುಡಿದು ದುಡಿದು ಕುಟುಂಬಕ್ಕಾಗಿ ತೇಯುವಂತಹ ಅಘೋಷಿತ ಯಂತ್ರಗಳನ್ನಾಗಿಸಿಬಿಟ್ಟಿದೆ. ಕುಟುಂಬ ವ್ಯವಸ್ಥೆಯಲ್ಲಿ ಒಬ್ಬ ಬಾಸ್ ಇದ್ದರೆ, ಇಡೀ ಆಡಳಿತ ವ್ಯವಸ್ಥೆ ಇಂತಹ ಚಾಕರಿಯನ್ನು ಕೆಲವು ಶತಮಾನಗಳಿಂದ ಸಮಾಜೀಕರಿಸಿಕೊಂಡು ಬಂದಿರುವ ದೊಡ್ಡ ಬಾಸ್.''

ಸಂತಾನೋತ್ಪತ್ತಿಯೇ ಅಗತ್ಯವಿಲ್ಲ ಎಂದು ಪ್ರತಿಪಾದಿಸುತ್ತಿರುವ ಯುವ ಹಾಗೂ ಹಳೆಯ ತಲೆಮಾರಿನ ಜನರಿದ್ದಾರೆ. ಅವರ ಅಭಿಯಾನ 'ಫ್ಯಾಮಿಲಿ ಅಬಾಲಿಷನ್' ಅಥವಾ 'ಬಿಗ್ ಕ್ವಿಟ್' ಎಂದೇ ಗುರುತಾಗಿದೆ. ಅವರೆಲ್ಲ ಮಗುವನ್ನು ಮಾಡಿಕೊಳ್ಳುವುದೇ ಬೇಡ ಎನ್ನುತ್ತಿರುವುದು 'ಕುಟುಂಬ ವ್ಯವಸ್ಥೆ'ಯ ಲಾಗಾಯ್ತಿನ ಸಡಿಲ ತತ್ತ್ವಗಳಿಂದಲೇ ಎನ್ನುವ ವಾದವಿದೆ. ಆಸ್ಟ್ರೇಲಿಯಾದ ರಾಜಕೀಯ ವಿಜ್ಞಾನಿ ಮೆಲಿಂಡಾ ಕೂಪರ್, ಕೋವಿಡ್ ಸಂದರ್ಭದಲ್ಲಿ ಕೂಲಿಕಾರ್ಮಿಕರ ಸ್ಥಿತಿಗತಿಯ ಕುರಿತು ಮಂಡಿಸಿದ ವಾದವೊಂದನ್ನೂ ಸೋಫಿ ತಮ್ಮ ಬರಹದಲ್ಲಿ ಉಲ್ಲೇಖಿಸಿದ್ದಾರೆ. ಕೋವಿಡ್ ಸಾಂಕ್ರಾಮಿಕ ರೋಗವು ವ್ಯಾಪಕವಾದ ಹೊತ್ತಿನಲ್ಲಿ, ಕುಟುಂಬದ ಸದಸ್ಯರಿಗೆಲ್ಲ ಸದಾಕಾಲ ದುಡಿದು ತಂದುಹಾಕುತ್ತಿದ್ದ ಕೂಲಿಕಾರ್ಮಿಕರು ತಮ್ಮ ಜೀವದ ಹಂಗು ತೊರೆದು ಹೊರಗೆ ಹೋಗಬೇಕಾಗಿ ಬಂತು. ಜೀವನವಿಡೀ ಹಾಗೆಯೇ ಮಾಡಿಕೊಂಡು ಬಂದ ಕೂಲಿಕಾರ್ಮಿಕನ ಜೀವಕ್ಕೆ ಬೆಲೆಯಿಲ್ಲವೆ? ಅವನು ಅಥವಾ ಅವಳು ಹಾಗೆ ಹೊರಗೆ ಹೋಗಬೇಕಾದದ್ದೇ ಪ್ರೀತಿಯ, ಆರೈಕೆಯ ಬಂಧನದಿಂದ. ಈ ಭವಬಂಧನ ಎನ್ನುವುದನ್ನು ಸಾಮಾಜಿಕ ವ್ಯವಸ್ಥೆ ಯಾವ ಪರಿಯಲ್ಲಿ ಚೌಕಟ್ಟನ್ನಾಗಿ ಮಾಡಿಬಿಟ್ಟಿದೆ ಎನ್ನುವುದಕ್ಕೆ ಇದೇ ಪುಷ್ಟಿ ಎಂದು ಮೆಲಿಂಡಾ ಕೆಲವು ಸಶಕ್ತ ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ಪ್ರೀತಿಸಿದವರಿಗಾಗಿ, ಹೆತ್ತ ನಲ್ಮೆಯ ಮಕ್ಕಳಿಗಾಗಿ ಸಾಯುವವರೆಗೂ ತೇಯುತ್ತಾ ಹೋಗಬೇಕೆನ್ನುವುದು ಯಾವ ನ್ಯಾಯ ಎನ್ನುವುದು 'ಫ್ಯಾಮಿಲಿ ಅಬಾಲಿಷನ್' ಅಭಿಯಾನದಲ್ಲಿ ಭಾಗಿಯಾಗಿದ್ದವರ ಪ್ರಶ್ನೆಯೂ ಆಗಿದೆ.

ಕೌಟುಂಬಿಕ ನೆಲೆಗಟ್ಟಿನಲ್ಲಿ ಸಣ್ಣದೊಂದು ಕಂಪನ ಕಾಣಿಸಿಕೊಂಡಿರುವ ಸಂದರ್ಭದಲ್ಲೇ, ಕುಟುಂಬದಾಚೆಗೆ ಸಾಂತ್ವನವನ್ನು ಅರಸುವ ಪ್ರಯತ್ನಗಳೂ ಶುರುವಾಗಿರುವುದು ಕುತೂಹಲಕರ. ಕುಟುಂಬಗಳ ಮಹತ್ವ ಇರುವುದು ಅವುಗಳು ನೆಮ್ಮದಿಯನ್ನು, ಸುರಕ್ಷತಾ ಭಾವವನ್ನು ದೊರಕಿಸಿಕೊಡುವ ಸಾಮಾಜಿಕ ಕೇಂದ್ರಗಳೆನ್ನುವುದರಲ್ಲಿ. ಈಗ ಆ ಸಾಂತ್ವನ ಪೇಟೆಯ ವಸ್ತುವಾಗಿ ಬಿಕರಿಗೆ ದೊರೆಯುವಂತಾಗಿದೆ.

ಕುಟುಂಬಗಳ ಮಹತ್ವ ಇರುವುದು ಅವುಗಳು ನೆಮ್ಮದಿಯನ್ನು, ಸುರಕ್ಷತಾ ಭಾವವನ್ನು ದೊರಕಿಸಿಕೊಡುವ ಸಾಮಾಜಿಕ ಕೇಂದ್ರಗಳೆನ್ನುವುದರಲ್ಲಿ. ಈಗ ಆ ಸಾಂತ್ವನ ಪೇಟೆಯ ವಸ್ತುವಾಗಿ ಬಿಕರಿಗೆ ದೊರೆಯುವಂತಾಗಿದೆ.

